ಪೋಸ್ಟೇಜ್ ಸ್ಟ್ಯಾಂಪುಗಳು—ಶಿಲ್ಕು ರುಜಪತಿಯ ಛಪ್ಪಿಮಾಹೆ ಸರಟಿಫಿಕೇಪ್‌ಗಳು.

ಸರ್ಕ್ಯುಲರ್ ನಂಬರ್ 1582, ತಾರೀಖು 19ನೇ ಮಾರ್ಚೀ 1884.

ಬೆಂಗಳೂರಲ್ಲಿರತಕ್ಕ ರೆಸೀಡೆಂಟರ ಟ್ರೈಜರಿ ಇನ್‌ಚಾರ್ಜ್ ಆಫೀಸರವರ ಅಪೇಕ್ಷೇ ಪ್ರಕಾರ ಕಾಂಪ್ಟ್ರೋಲರ್ ಯವರು ನಿಯಮಿಸುವ ದೇನಂದರೆ, ಟ್ರೈಜರಿ ಆಫೀಸರ್‌ಗಳು ಅವರವರ ಖಜಾನೇಗಳಲ್ಲಿರತಕ್ಕ ಪೋಸ್ಟೇಜ್ ಲೇಬಲ್ಲುಗಳ ಶಿಲ್ಕು ರುಜಪತಿ ಮಾಡಿವ ವಂದು ಸರ್ಟಿಫಿಕೇಟನ್ನು ಸಿವಿಲ್ ಅಕೌಂಟ್ ಕೋಡ್ 1ನೇ ಭಾಗದ 303ನೇ ಪುಟದಲ್ಲಿ ತಕ್ಕ XVIIIನೇ ರೂಲ್ E ಆರ್ಡಿಡಿಕ್ಸ್ ನಮೂನೆಯಲ್ಲಿ ತಯಾರ್ಮಾಡಿ ಅವರು ಕಳುಹಿಸಿಕೊಡುವ 1884ನೇ ಇಸವಿ ಮಾರ್ಚೀ ವ ಸೆಪ್ಟಂಬರ್ ಮಾಹೆಗಳ ಹರ್ ಮಾಜೆಸ್ಟೀಸ್ ಲೆಜ್ಜುಗಳೊಂದಿಗೆ ಕಳುಹಿಸಬೇಕಲ್ಲದೆ ಪ್ರತಿಸಾಲಿನಲ್ಲಿಯೂ ಬದಸ್ತೂರು ಕಳುಹಿಸತಕ್ಕದ್ದು.

ತಾಲ್ಲೂಕು ಟ್ರೈಜರಿಗಳಲ್ಲಿ ಶಿಲ್ಕು ಯಿರತಕ್ಕ ಲೇಬಲ್‌ಗಳ ಬಗ್ಗೆ ಬದಸ್ತೂರ್ ಅಮ್ಮಲ್‌ದಾರ್ರುಗಳಿಂದ ಸರ್ಟಿಫಿಕೇಟ್‌ಗಳನ್ನು ತರಿಸಿಕ್ಕೊಂಡು ಡಿಸ್ಟ್ರಿಕ್ಟ್ ಟ್ರೈಜರಿ ಸರ್ಟಿಫಿಕೇಟಿನೊಂದಿಗೆ ಕೇರಿಸತಕ್ಕದ್ದು.

ಮೊಖ್ತೇಸರಿ ವ ಜಿಲ್ಲರೆ ನೌಕರರು ರೇಯಿಲ್ ಮಾರ್ಗವಾಗಿ ಸಂಚರಿಸುವಣ.

ಸರ್ಕ್ಯುಲರ್ ನಂಬರ್ 1584, ತಾರೀಖು 26ನೇ ಮಾರ್ಚೀ 1884.

ಕಾಂಪ್ಟ್ರೋಲರ್‌ಯವರು, ದೀವಾನರವರ ಮಾಹೆ ಮಜಕೂರು 20ನೇ ಮುಕ್ತಂ 6299—494ನೇ ನಂಬರ್ ಪ್ರೊಸೀಡಿಂಗ್ಸ್‌ನಲ್ಲಿ ಮಂಜೂರ್ಮಾಡಲ್ಪಟ್ಟ ಪ್ರಕಾರ ತಿಳಿಸುವದೇನಂದರೆ, ಐಯಿಂದ ಯಿಯಿಲ್ ಮಾರ್ಗವಾಗಿ ಸಂಚರಿಸುವ ಮೊಖ್ತೇಸರು ಉದ್ಯೋಗಸ್ಥರು ವ ಜಿಲ್ಲರೇ ನೌಕರರು ಸಹ ಅವರು ಯಾವ ತರಗತಿ ಭಂಡಿಯಲ್ಲಿ ಪ್ರಯಾಣ ಮಾಡುವದಕ್ಕೆ ಅರ್ಹರಾಗಿರುತ್ತಾರೋ ಅಂತಾ ತರಗತಿಯ ದುಗಣಿಚಾರ್ಜನ್ನು ಪಡೆಯತಕ್ಕದ್ದು. ಜಿಲ್ಲರೆ ನೌಕರರು ರೇಯಿಲ್ ಮಾರ್ಗವಾಗಿ ಸಂಚಾರ ಮಾಡುವಾಗ ಇದುವರಿಗಿನಂತೆ ರೋಜಿನಾ ಭತ್ಯವು ಪಡಿಯತಕ್ಕದ್ದಲ್ಲ.

ಹೆಚ್. ಹಡಿರ್ಸ,
ಕಾಂಪ್ಟ್ರೋಲರ್.

ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರ್ಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 21—4.

ಮೃತಪಟ್ಟ ವೆಂಕಟಪುರಾಣೀಕನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶ್ರೀಕಂಠಯ್ಯನು ಮೈನರ್ ಸುಬ್ಬು ಗಾರ್ಡಿಯರ್ ತಾಯಿ ಲಿಂಗಮ್ಮ, ಮೃತಪಟ್ಟ ಸದರೀ ವೆಂಕಟಪುರಾಣೀಕನಿಗೆ ಮಗಳ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕಡಬದ ತಾಲ್ಲೂಕು ತುರ್ಯೇಕೆರೆ ಸ್ಥಳದ ವೈನರ್ ಶ್ರೀಕಂಠಯ್ಯನ ಗಾರ್ಡಿಯರ್ ತಾಯಿ ಲಿಂಗಮ್ಮನು, ಪಟೋ ಗ್ರಾಮದ ವಾಸಸ್ಥನಾಗಿ ಮೃತಪಟ್ಟ ವೆಂಕಟಪುರಾಣೀಕನ ಜಿಂದಗಿ ಬಗ್ಗಾಗಿ ಬರತಕ್ಕ 600 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೈನರ್ ಶ್ರೀಕಂಠಯ್ಯನ ಗಾರ್ಡಿಯರ್ ತಾಯಿ ಲಿಂಗಮ್ಮನ ಅರ್ಜೀಯನ್ನು 1884ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 9ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಪುರಾಣೀಕನ ಆಸ್ತಿಗೆ ಹಕ್ಕುದಾರರಾದ ವಿಸ್ತರೂ ಈ ಕೋರ್ಟನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್ ಜಡ್ಜ್.